ಸಾಕ್ಷಿಯನ್ನು ದಿಃ **25.09.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ 3 ರಿಂದ 5 ನೇ ಪ್ರತಿವಾದಿ ರವರ ಪರ ಶ್ರೀ ಸಿ ಆರ್ ಪರ ಶ್ರೀ ಎಸ್ ಕೆ ಬಿ ವಕೀಲರಿಂದಃ-

ದಾವಾ ಆಸ್ತಿಗಳು ನನ್ನ ತಾತನಿಂದ ಬಂದಂತಹ ಆಸ್ತಿಗಳು ಎಂದರೆ ಸರಿ. ನನ್ನ ತಾತನ ಮರಣಾನಂತರ ಸದರಿ ಆಸ್ತಿಗಳು ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದಿವೆ ಎಂದರೆ ಸರಿ. ನನ್ನ ತಂದೆಯ ಮರಣಾನಂತರ ದಾವಾ ಆಸ್ತಿಗಳು ನನಗೂ ಪ್ರತಿವಾದಿಯರಿಗೂ ಪಿತ್ರಾರ್ಜಿತವಾಗಿ ಬಂದಿವೆ ಎಂದರೆ ಸರಿ. 3 ರಿಂದ 5 ನೇ ಪ್ರತಿವಾದಿಯಾರಿಗೂ ದಾವಾ ಸ್ವತ್ತಿನಲ್ಲಿ ಸಮನಾದ ಹಿಸ್ಸೆಯ ಹಕ್ಕು ಇದೆ ಎಂದರೆ ಸರಿ. 3 ರಿಂದ 5 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳಲ್ಲಿ ಸಮನಾದ ಹಿಸ್ಸೆ ನೀಡಲು ನನಗೆ ತೊಂದರೆ ಇಲ್ಲ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.